

★ ಸಹೋದ್ಯೋಗಿಗಳೊಡನೆ ಜೊತೆಗೂಡಿ ಕೆಲಸಮಾಡುವ ಮನೋಭಾವ ಇರಲಿ. ಉತ್ತಮ ಮಾತುಗಾರ ತಾನು ಮಾತನಾಡುವಾಗ ಉಪಯೋಗಿಸುವ ಪದಗಳಿಗೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಬೇಕು. ಮಾತು ಮಾತಿಗೂ ಇನ್ನೊಬ್ಬರ ಋಣಾತ್ಮಕ ವಿಚಾರಗಳನ್ನೇ ಹೇಳುವುದಕ್ಕಿಂತ ಆ ವ್ಯಕ್ತಿಯ ಉತ್ತಮ ಅಂಶಗಳನ್ನು ಗುರುತಿಸಿ ಅದರ ಕುರಿತಾಗಿ ಮಾತನಾಡುವುದು ಸಭ್ಯ ವ್ಯಕ್ತಿಯ ಲಕ್ಷಣ. ಇನ್ನೊಬ್ಬರ ಕುರಿತಾಗಿ ತೀರಾ ಲಘುವಾಗಿ ಮಾತನಾಡುವುದು, ಅವರ ಕುರಿತಾಗಿ ಹಾಸ್ಯವಾಡುತ್ತಾ ಅವಹೇಳನ ಮಾಡುವುದರಿಂದ ನಮ್ಮ ವ್ಯಕ್ತಿತ್ವದ ಘನತೆ ಕಡಿಮೆಯಾಗುತ್ತದೆ ಎನ್ನುವುದು ಗೊತ್ತಿರಲಿ.

★ ಇನ್ನೊಬ್ಬರ ಕುರಿತಾಗಿ ಎಂದೂ ಚಾಡಿ ಹೇಳಬಾರದು, ಅದೇ ರೀತಿ ಇನ್ನೊಬ್ಬರು ಆಡುವ ಚಾಡಿ ಮಾತಿಗೆ ಕಿವಿಕೊಟ್ಟು ಅವಸರದ ತೀರ್ಮಾನವನ್ನು ತೆಗೆದುಕೊಳ್ಳಬಾರದು. ಆ ಮಾತಿನಲ್ಲಿ ಸತ್ಯವಿದೆಯೆ ಎನ್ನುವುದನ್ನು ತಿಳಿದುಕೊಂಡು ನಿರ್ಧಾರಕ್ಕೆ ಬನ್ನಿ.

ಸಂವಹನದಲ್ಲಿ ಉತ್ತಮ ಕೇಳುಗನಾಗುವುದೂ ಬಹಳ ಮುಖ್ಯವಾಗಿದ್ದು, ಇಲ್ಲಿ ಪರಿಪೂರ್ಣ ಆಲಿಸುವಿಕೆಯು ಪ್ರಬುದ್ಧ ಮಾನಸಿಕ ಸ್ಥಿತಿಯೂ ಹೌದು. ಮಾತನ್ನು ಗಮನಿಸಿ ಕೇಳುವುದರಿಂದ ಅರ್ಧದಷ್ಟು ಜಗಳಗಳಿಗೆ ಆಸ್ಪದ ಇರುವುದಿಲ್ಲ. ಒಬ್ಬ ಉತ್ತಮ ಕೇಳುಗ ಒಬ್ಬ ಉತ್ತಮ ವಾಗ್ಮಿಯೇ (ಮಾತುಗಾರ) ಆಗಿರುತ್ತಾನೆ. ಆದರೆ ಉತ್ತಮ ಮಾತುಗಾರರೆಲ್ಲರೂ ಉತ್ತಮ ಕೇಳುಗರಾಗಿರಬೇಕೆಂದಿಲ್ಲ. ಮಾತನಾಡುವ ಸಂದರ್ಭದಲ್ಲಿ ಮಧ್ಯದಲ್ಲಿ ಪ್ರಶ್ನೆಗಳಿದ್ದರೆ ಅರ್ಥಪೂರ್ಣ ಮಾತುಕತೆ ಸಾಧ್ಯ.

## ನೀವೊಬ್ಬ ಪರಿಪೂರ್ಣ ಕೇಳುಗನಾಗಬೇಕೆಂದರೆ ಈ ಕೆಳಗಿನ ಅಂಶಗಳನ್ನು ಗಮನಿಸಿ:

★ ಮಾತನಾಡುವ ಸಂದರ್ಭದಲ್ಲಿ ಎದುರಿನ ವ್ಯಕ್ತಿಯ ಮೇಲೆಯೇ ದೃಷ್ಟಿ ನೆಟ್ಟಿರಲಿ.

★ ಮಾತಿನ ಮಧ್ಯೆ ತಲೆ ಅಲ್ಲಾಡಿಸುವುದು, ಮಾತುಗಳನ್ನು ಪುಷ್ಟೀಕರಿಸುವುದು, ಪೂರಕವಾದ ಪದಗಳನ್ನು ಜ್ಞಾಪಿಸುವುದನ್ನು ಮಾಡಬೇಕು.

★ ಅಭಿಪ್ರಾಯ ಭೇದವಿದ್ದರೆ ಅದು ಕೇವಲ ನಿರ್ದಿಷ್ಟ ವಿಷಯಕ್ಕೆ ಮಾತ್ರ ಸಂಬಂಧಿಸಿದ್ದೆಂದು ಭಾವಿಸಿ. ಅದು ವ್ಯಕ್ತಿಯ ಸ್ನೇಹ ಸಂಬಂಧದ ಮೇಲೆ ಯಾವುದೇ ಪರಿಣಾಮ ಬೀರದಂತೆ ಎಚ್ಚರದಿಂದ ಉತ್ತರಿಸಿ.

★ ಮಾತನಾಡುವವರನ್ನು ಮಾತಿನ ಮಧ್ಯೆ ಅರ್ಧದಲ್ಲೇ ತಡೆಯಬೇಡಿ.

★ ಮಾತನ್ನು ಆಲಿಸುತ್ತಿರುವಾಗ ಪ್ರಮುಖ ಅಂಶಗಳನ್ನು ನೆನಪಿಟ್ಟುಕೊಳ್ಳಿ.

★ ಮಾತನ್ನು ಕೇಳುತ್ತಿರುವಾಗ ಅನ್ಯಮನಸ್ಕತೆ ಬೇಡ.

## ನೀವು ಉತ್ತಮ ಮಾತುಗಾರರಾಗಲು ಈ ಕೆಳಕಂಡ ಪ್ರಯತ್ನಗಳನ್ನು ಮಾಡಬಹುದು.

★ ನಮ್ಮ ನಡವಳಿಕೆ ಹಾಗೂ ಮಾತಿನ ಶೈಲಿಯ ಕುರಿತು ನಿಮ್ಮನ್ನು ನೀವೇ ವಿಮರ್ಶಿಸಿಕೊಳ್ಳಿ. ಪ್ರತಿದಿನ ಮಾತಿನಲ್ಲಿನ ನಮ್ಮ ನ್ಯೂನತೆಗಳನ್ನು ಅರಿತುಕೊಂಡು ಸರಿಪಡಿಸಿಕೊಳ್ಳಬೇಕು. ಪ್ರತೀ ಮಾತಿನ ಸಂದರ್ಭದಲ್ಲೂ ನಾನು ಹೇಳಿದ ವಿಚಾರ ತೀರಾ ಅವಶ್ಯಕ ಹಾಗೂ ಅನಿವಾರ್ಯವಾಗಿದ್ದು, ಇನ್ನೂ ಉತ್ತಮ ರೀತಿಯಲ್ಲಿ ಈ ವಿಷಯ ತಿಳಿಸಬಹುದಾಗಿತ್ತಾ ಎಂದು ವಿಶ್ಲೇಷಿಸಿಕೊಳ್ಳಬೇಕು.

★ ನಾವಾಡಿದ ನಿರ್ದಿಷ್ಟ ಮಾತುಗಳಿಂದ ಒಂದು ಕುಟುಂಬಕ್ಕೆ (ಮನೆಯ ಸಂದರ್ಭವಾಗಿದ್ದರೆ) ಕಚೇರಿಗೆ, ಸಂಘಟನೆಗೆ ಉಂಟಾದ ಲಾಭ– ನಷ್ಟ, ಗಳಿಕೆ –ಹಾನಿಯ ಕುರಿತು ವಿಶ್ಲೇಷಿಸಬಹುದು.

★ ಮಾತಿನ ಮಧ್ಯೆ ನಮ್ಮ ಧ್ವನಿಯ ಕುರಿತು ಗಮನಿಸುವುದರಿಂದ ಏರಿಳಿತಗಳಲ್ಲಾಗುವ ಏಕತಾನತೆಯನ್ನು ತೊಡೆದು ಹಾಕಬಹುದು.

★ ಮಾತುಗಾರ ಅರ್ಥವಾಗುವಂತಹ ಪದಗಳನ್ನು ಬಳಸಿ ಮಾತನಾಡುವುದರಿಂದ ಕೇಳುಗನಿಗೆ ಹತ್ತಿರನಾಗಬಲ್ಲ.

★ ನಮ್ಮ ಮಾತಿನ ಮೇಲೆ ನಮಗೆ ನಂಬಿಕೆ ಇರಬೇಕು. ಆಗ ನಮ್ಮ ಮಾತನ್ನು ಇತರರೂ ಕೇಳುವರು.

★ ಇನ್ನೊಬ್ಬರ ಬಗ್ಗೆ ಟೀಕೆ ಮಾಡುವಾಗ, ಅದೇ ಮಾತನ್ನು ಇನ್ನೊಬ್ಬರು ನನ್ನ ಕುರಿತಾಗಿ ಹೇಳಿದರೆ ಹೇಗನ್ನಿಸುತ್ತದೆ ಎನ್ನುವುದನ್ನೂ ಆಲೋಚಿಸಿ.

ಸಮಾಜದಲ್ಲಿ ಪ್ರತಿಸ್ಪರ್ಧೆ ಹೆಚ್ಚಿದೆ. ಉದ್ಯೋಗ ಮಾರುಕಟ್ಟೆಯಲ್ಲಿ ಉತ್ತಮ ಸಂವಹನಕಾರನಿಗೆ ಸಾಕಷ್ಟು ಬೇಡಿಕೆಯಿದೆ. ಸ್ಪಷ್ಟವಾದ ಮಾತುಗಾರಿಕೆ, ಗಹನವಾಗಿ ಕೇಳಿಸಿಕೊಳ್ಳುವಿಕೆ, ಸಹ್ಯವಾಗಬಹುದಾದ ಆಂಗಿಕ ಭಾಷೆ ಇವೆಲ್ಲವನ್ನೂ ಸೇರಿಸಿಕೊಂಡರೆ ಉಳಿದ ವ್ಯಕ್ತಿಗಳಿಗಿಂತ ಸ್ಪರ್ಧೆಯಲ್ಲಿ ಮುಂದೆ ಬರಬಹುದು. ಸ್ವಪ್ರಯತ್ನದಿಂದ ಸಂವಹನ ಜಾಣ್ಮೆಯನ್ನು ವೃದ್ಧಿಸಿಕೊಳ್ಳಬಹುದು. ಇದರಿಂದ ಸಮಾಜದಲ್ಲಿ, ಕುಟುಂಬದಲ್ಲಿ, ವೃತ್ತಿ ಕ್ಷೇತ್ರದಲ್ಲಿ ಪ್ರಶಂಸೆ, ಉತ್ತಮ ಸ್ಥಾನಮಾನ ಸಿಗುತ್ತದೆ. ●